# ಸಲಾರ್ ಕನ್ನಡದ ಹೆಮ್ಮೆಯೇ ದ್ರೋಹವೇ?


‘ಸಲಾರ್’ ಚಿತ್ರದಲ್ಲಿ ಪ್ರಭಾಸ್

**ಈಗಿನ ‘ಪ್ಯಾನ್ ಇಂಡಿಯಾ’ ಸಿನಿಮಾಗಳಿಂದ ಉದ್ಧಾರವೋ ದಿವಾಳಿಯೋ ಆಗುವುದು ಕನ್ನಡವಲ್ಲ; ಆ ಸಿನಿಮಾದ ನಿರ್ಮಾಪಕರು ನಿರ್ದೇಶಕರಷ್ಟೆ.**

**■ ಪದ್ಮನಾಭ ಭಟ್**

‘ರಾಜಕುಮಾರ’, ‘ಕೆಜಿಎಫ್’ನಂಥ ಹಿಟ್ ಸಿನಿಮಾಗಳನ್ನೇ ಕೊಟ್ಟಿರುವ ಹೊಂಬಾಳೆ ಫಿಲ್ಮ್ಸ್ ನಿರ್ಮಾಣ ಸಂಸ್ಥೆ ತನ್ನ ಮುಂದಿನ ಸಿನಿಮಾ ಘೋಷಿಸಿದೆ. ‘ಕೆಜಿಎಫ್’ ಎರಡು ಭಾಗಗಳನ್ನು ನಿರ್ದೇಶಿಸಿದ್ದ ಪ್ರಶಾಂತ್ ನೀಲ್ ನಿರ್ದೇಶನದಲ್ಲಿ ತೆಲುಗಿನ ಸೂಪರ್‌ಸ್ಟಾರ್ ಪ್ರಭಾಸ್ ನಾಯಕನಾಗಿ ನಟಿಸುತ್ತಿರುವ ‘ಸಲಾರ್’ ಚಿತ್ರವನ್ನು ಬಿಗ್ ಬಜೆಟ್‌ನಲ್ಲಿ ನಿರ್ಮಾಣ ಮಾಡುವುದಾಗಿ ಹೊಂಬಾಳೆ ಫಿಲ್ಮ್ಸ್ ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಹೇಳಿಕೊಂಡಿದೆ.

ಈ ಸುದ್ದಿಗೆ ಎರಡು ರೀತಿಯ ಪ್ರತಿಕ್ರಿಯೆಗಳು ಬರುತ್ತಿವೆ. ಒಂದು, ಕನ್ನಡದ ಸಂಸ್ಥೆಯೊಂದು, ನಿರ್ದೇಶಕನೊಬ್ಬ ದಕ್ಷಿಣ ಭಾರತದ ಅತ್ಯಂತ ಜನಪ್ರಿಯ ನಟರಲ್ಲೊಬ್ಬರಾದ ಪ್ರಭಾಸ್ ಅವರನ್ನು ನಿರ್ದೇಶಿಸುತ್ತಿದ್ದಾರೆ; ಇದು ಕನ್ನಡದ ಕೀರ್ತಿ ಪತಾಕೆಯನ್ನು ಎತ್ತರಿಸುವ ಕೆಲಸ ಎಂದು ಹೆಮ್ಮೆಯಿಂದ ಉಬ್ಬಿಹೋದ ಜನರ ಹರ್ಷೋದ್ಗಾರದ ಪ್ರತಿಕ್ರಿಯೆ. ಪ್ರಶಾಂತ್ ನೀಲ್ ಕನ್ನಡ ಬಿಟ್ಟುಹೋಗುತ್ತಿದ್ದಾರೆ; ಕನ್ನಡಕ್ಕೆ ದ್ರೋಹ ಮಾಡುತ್ತಿದ್ದಾರೆ ಎಂಬುದು ಇನ್ನೊಂದು ರೀತಿಯ ಪ್ರತಿಕ್ರಿಯೆ.

ಈ ಎರಡೂ ಪಕ್ಷಗಳಲ್ಲಿಯೂ ಅತಿರೇಕದ ಛಾಯೆಗಳು ಎದ್ದು ಕಾಣುತ್ತವೆ. ತಮ್ಮ ಬದುಕಿನ ದಾರಿಯಲ್ಲಿ ಹಿರಿದಾದದ್ದನ್ನು ಸಾಧಿಸಬೇಕು ಎಂಬ ಹಂಬಲ ಎಲ್ಲರಿಗೂ ಇದ್ದೇ ಇರುತ್ತದೆ. ಆದರೆ ‘ಹಿರಿದಾದದ್ದು’ ಎಂಬುದರ ವ್ಯಾಖ್ಯಾನ ಒಬ್ಬರಿಂದ ಇನ್ನೊಬ್ಬರಿಗೆ ಭಿನ್ನವಾಗಿರುತ್ತದಷ್ಟೆ. ಹೊಂಬಾಳೆ ಫಿಲ್ಮ್ಸ್ ಪಾಲಿಗೆ ಅದು ಬಜೆಟ್ ಮೊತ್ತದ ವಿಸ್ತರಣೆಯಾಗಿರಬಹುದು. ಪ್ರಶಾಂತ್ ನೀಲ್‌ಗೆ ಅದು ಹೆಚ್ಚು ಭಾಷೆಗಳಲ್ಲಿ, ದೊಡ್ಡ ಸ್ಟಾರ್‌ಗೆ ಸಿನಿಮಾ ನಿರ್ದೇಶನ ಮಾಡುವುದಾಗಿರಬಹುದು. ಕನ್ನಡದ ಮಾರುಕಟ್ಟೆ ವಿಸ್ತರಿಸಿದ ಸಿನಿಮಾ ಎಂದೇ ಗುರ್ತಿಸುವ ‘ಕೆಜಿಎಫ್’ ಸಿನಿಮಾದಲ್ಲಿ ಎಷ್ಟರಮಟ್ಟಿಗೆ ಕನ್ನಡತನ ಇದೆ ಎಂದು ನೋಡಿದರೆ ಈ ಮಾತು ಇನ್ನಷ್ಟು ಸ್ಪಷ್ಟವಾಗುತ್ತದೆ. ಹೊಂಬಾಳೆ ಫಿಲ್ಮ್ಸ್ ಕನ್ನಡದ ಚೌಕಟ್ಟಿನಿಂದ ಪ್ಯಾನ್ ಇಂಡಿಯಾ ಮಟ್ಟಕ್ಕೆ ಏರುವ ಪ್ರಯತ್ನದಲ್ಲಿರುವುದು ಸ್ಪಷ್ಟ. ಈ ಜಿಗಿತದಲ್ಲಿ ಅವರಿಗೆ ಕನ್ನಡ ಎನ್ನುವುದು ಕಾಲಿಗೆ ಸಿಕ್ಕಿದ ಬಳ್ಳಿಯ ಹಾಗೆ ಕಂಡಿರಬಹುದು. ಕನ್ನಡ ಎಂದು ಹೇಳಿಕೊಂಡರೆ ಕೊಂಚ ಕೆಳಮಟ್ಟದಲ್ಲಿ ಬಿಂಬಿತವಾಗುತ್ತೇವೆಂಬ ಕೀಳರಿಮೆಯೂ


ಪ್ರಶಾಂತ್ ನೀಲ್

ಇರಬಹುದು. ಈ ಊಹೆಗೆ ಪುಷ್ಟಿ ಒದಗಿಸುವಂತೆ ‘ಸಲಾರ್’ ಘೋಷಣೆಯ ನಂತರ ಅವರ ಟ್ವಿಟರ್ ಖಾತೆಯಲ್ಲಿನ ಡಿಸ್ಕ್ರಿಪ್ಶನ್‌ನಲ್ಲಿ ‘ಕನ್ನಡ’ ಎಂಬ ಪದ ಮಾಯವಾಗಿದೆ. ‘ಸಲಾರ್’ ಪೋಸ್ಟರ್‌ಗಳಲ್ಲಿ ‘ಇಂಡಿಯನ್ ಸಿನಿಮಾ’ ಎಂಬ ಶಬ್ದ ಕಿರೀಟದಲ್ಲಿನ ಪುಚ್ಛದಂತೆ ಅಚ್ಚಾಗಿದೆ.

ಇವನ್ನೆಲ್ಲ ಕೊಂಚ ಪಕ್ಕಕ್ಕಿಟ್ಟು ನೋಡೋಣ. ಕೆಜಿಎಫ್, ಸಲಾರ್ ಅಂಥ ಸಿನಿಮಾಗಳನ್ನು ಸಾಲು ಸಾಲು ಮಾಡಿದರೂ ಕನ್ನಡದ ಸಂಸ್ಕೃತಿಗೆ ಅವು ಏನನ್ನು ಸೇರಿಸಬಹುದು ಎಂಬ ಪ್ರಶ್ನೆಯನ್ನು ಹಾಕಿಕೊಂಡರೆ ಗುಂಡಾನುಗುಂಡ ಸೊನ್ನೆಯಷ್ಟೇ ಕಣ್ಣೆದುರಿಗೆ ಬಂದು ನಿಲ್ಲುತ್ತದೆ. ಅಪ್ಪಟ ಕನ್ನಡತನದ ಸಿನಿಮಾಗಳನ್ನು ಮಾಡಿ ಜಗತ್ತಿನ ಶ್ರೇಷ್ಠ ನಿರ್ದೇಶಕರಲ್ಲೊಬ್ಬರು ಎಂದು ಗುರ್ತಿಸಿಕೊಂಡಿರುವ ಗಿರೀಶ ಕಾಸರವಳ್ಳಿಯವರಂಥವರ ಕೊಡುಗೆಯ ಎದುರಲ್ಲಿ ಈಗಿನ ‘ಪ್ಯಾನ್ ಇಂಡಿಯಾ’ ಸಿನಿಮಾಗಳನ್ನು ನಿಲ್ಲಿಸಿದರೆ ಅವುಗಳ ಪೊಳ್ಳುತನ ಥಟ್ಟನೆ ಕಣ್ಣಿಗೆ ರಾಚುತ್ತದೆ. ಪ್ಯಾನ್ ಇಂಡಿಯಾ ಸಿನಿಮಾಗಳಿಂದ ಉದ್ಧಾರವೋ ದಿವಾಳಿಯೋ ಆಗುವುದು ಕನ್ನಡವಲ್ಲ; ಆ ಸಿನಿಮಾದ ನಿರ್ಮಾಪಕರು ನಿರ್ದೇಶಕರಷ್ಟೆ. ಈಗ ಸುದ್ದಿಯಾಗುತ್ತಿರುವ ‘ಸಲಾರ್’ ಸಿನಿಮಾದಿಂದ ಕನ್ನಡಕ್ಕೆ ಆಗುವ ಪ್ರಯೋಜನವೂ ಅಷ್ಟರದ್ದೇ. ಹಾಗಾಗಿ ‘ಸಲಾರ್’ ಕನ್ನಡದ ಹೆಮ್ಮೆಯೂ ಅಲ್ಲ; ದ್ರೋಹವೂ ಅಲ್ಲ. ಅದು ಬಹುಕೋಟಿ ಹಾಕಿ ದುಪ್ಪಟ್ಟು ಪಡೆಯುವ ವ್ಯಾಪಾರವಷ್ಟೆ. ■